ದೇವರೆಂದು ನಂಬಿದವ, ನಂಬಿಸಿದವ. ಕಣ್ಣಲ್ಲಿ ಮಾತ್ರವೇ ಆರಾಧಿಸಿ, ತಬ್ಬಿ, ಮುತ್ತಿಟ್ಟರೂ ದೇಹದ ಮೂಲೆ ಮೂಲೆಗೂ ಸುಖ ಕೊಟ್ಟವ. ಮನದ ತುಂಬಾ ಸುಖದ ಅಕ್ಷಯ ಪಾತ್ರೆಯೇ ಆದವ, ನನ್ನನ್ನೇ ಜಗತ್ತೆಂದುಕೊಡವ. ಹೀಗೆ ಐದಾರು ವರ್ಷ ಎಡಬಿಡದೆ ಹಿಂದೆ ಬಿದ್ದವ. ಬಿದ್ದರೂ ಬೋರ್ ಆಗದೆ ಹೋದವ, ದಿನವೂ ಪ್ರೀತಿಯ ಹೊಸ ಹೊಸ ರೂಪ ವಿನ್ಯಾಸಗಳ ಮಾದರಿಯಾದವ. ಆದರೆ, ಭಾವನೆಗಳೇ ಬದುಕಲ್ಲ. ಪ್ರೀತಿ ಹೊಟ್ಟೆ ತುಂಬಿಸುವುದಿಲ್ಲ, ಪ್ರೀತಿಗೆ ಬೇಕಾದ್ದನ್ನು ಕೊಡಿಸುವ ತಾಕತ್ತಗಾಲಿ, ಬಂಗಲೆ, ದುಬಾರಿ ಕಾರು ಕೊಳ್ಳುವ, ಐಷಾರಾಮಿ ಬದುಕು ಸಾಗಿಸುವ ಸಿರಿವಂತಿಕೆಯನ್ನು ಪ್ರಸಾದಿಸುವಷ್ಟು ಹಸಿವು ನಿನಗಿಲ್ಲವೆಂಬುದನ್ನೂ ಅರ್ಥಮಾಡಿಸಿದವನು, ಪ್ರೀತಿ ಮಾತ್ರವೇ ಹಸಿವೆಂದು ಭಾವಿಸಿದ್ದವನು. ಹಸಿವಿನಲ್ಲೂ ಪ್ರೀತಿಸುವ, ಹರ್ಷಿಸುವ, ಸುಖಿಸುವ, ಬಡತನವನ್ನು ಮಾತ್ರವೇ ಹಂಚುವ ತಾಕತ್ತನ್ನು ಹೊಂದಿರುವ ಸೂಪರ್ ಲವ್‌ಮ್ಯಾನ್ ನೀನೆಂದು ವರ್ಷಗಳು ಉರುಳಿದಂತೆಲ್ಲಾ ನನ್ನಲ್ಲಿ ತಿಳಿವಳಿಕೆ ಮೂಡಿಸಿದವನೂ ನೀನೇ ಕಣೋ. ಭವಿಷ್ಯದ ಬಗ್ಗೆ ಅನಂತ ಭಯ ಬಿತ್ತಿದ್ದವನೂ ನೀನೇ. ಇದರಿಂದಾಗಿಯೇ ನಾನು ಡಿಪ್ರೆಶನ್‌ಗೆ ಒಳಗಾಗಿದ್ದೆ. ಕಾಲೇಜಲ್ಲಿ ಓದುವಾಗ ಹೇಗಿದ್ದೆಯೋ ನಂತರವೂ ಹಾಗೆ ಇದ್ದವ. ಡಿಗ್ರಿ ಫಸ್ಟ್ ಕ್ಲಾಸಲ್ಲಿ ಪಾಸಾದರೂ ನೌಕರಿ ಸಿಗದಿದ್ದವ, ಸಿಗದಿದ್ದರೂ ಹಾಯಾಗಿದ್ದವನು! ಬಡತನದ ಬದುಕು ನಿನಗೆ ಭಾರವೆನಿಸಲಿಲ್ಲವಲ್ಲೋ ಮಾರಾಯಾ? ಅದೇ ಜೀನ್ಸ್, ಮಾಸಿದ ದೊಗಲೆ ಶರ್ಟು, ಅದೇ ಕಿಶೋರಕುಮಾರನ 'ಪ್ಯಾರ್ ದಿವಾನಾ ಹೋತಾ ಹೈ' ಹಳೆಸಾಂಗು. ಕೆಲಸವೇ ಸಿಗಲಿಲ್ಲವೋ, ಪ್ರಾಮಾಣಿಕವಾಗಿ ಪ್ರೀತಿಸಿದಂತೆ ಭವಿಷ್ಯದ ಕುರಿತು ಅಪ್ರಾಮಾಣಿಕತೆಯೋ, ಬೇಜವಾಬ್ದಾರಿಯೋ... ಅರ್ಥವಾಗದ ನವ್ಯಕಥೆಯಂತೆ ಬೋರ್ ಆದೆ. ಏನೋ ಸಾಧಿಸಿ ಹೆಮ್ಮರದಂತೆ ಬೆಳೆಯುತ್ತಿಯೆಂದುಕೊಂಡರೆ ಎಂ.ಎ. ಓದುವ ಪ್ರಯತ್ನ ಮಾಡದೆ, ನೌಕರಿಯನ್ನೂ ತಲಾಷ್ ಮಾಡದೆ, ಬಡತನವನ್ನೇ ಬೆಚ್ಚಗೆ ಹಾಸಿ ಹೊದೆಯುತ್ತಾ, ತಮ್ಮ ತಂಗಿಯರ ಭವಿಷ್ಯದ ಕುರಿತೂ ಗಾಬರಿಯಾಗದೆ, ಅಪ್ಪನ ಪೆನ್ಷನ್‌ನಲ್ಲಿಯೇ ಹಾಯಾಗಿರುವ ನೀನು, ನನ್ನ ಪಾಲಿನ ನೈಂಥ್ ವಂಡರ್ ಆಗಿಬಿಟ್ಟೆ. ನನಗೆ ಮನೆಯಲ್ಲಿ ಗಂಡು ನೋಡುತ್ತಿದ್ದಾರೆಂದಾಗ ನನ್ನ ಮುಂದೆಯೇ ಅತ್ತು ನಿಟ್ಟುಸಿರುಬಿಟ್ಟು ದುರಂತ ನಾಯಕನಾದೆ; ನಿನ್ನಲ್ಲಿ ಮಾಸ್ ಹೀರೊನ ಕಾಣಲು ತವಕಿಸುವ ನನ್ನಲ್ಲಿ ದಿನಗಳೆದಂತೆ ನಿರಾಶೆ ಹುಟ್ಟಿಸಿದೆ. ನನ್ನನ್ನು ಪಡೆಯುವ ಯಾವ ಹಟವನ್ನೂ ಮನಗಾಣಿಸಲಿಲ್ಲ. ನಮ್ಮೊಂದಿಗೆ ಓದಿದವರೆಲ್ಲಾ ಸರ್ಕಾರಿ ಕಚೇರಿಯಲ್ಲೋ, ಕಂಪನಿಯಲ್ಲೋ, ಖಾಸಗಿ ಮಾಲ್‌ಗಳಲ್ಲೋ, ನಾಟಕ ಸಿನಿಮಾಗಳಲ್ಲೋ ದುಡಿವ ದಾರಿಯನ್ನು ಕಂಡುಕೊಂಡರೆ, ಹುಲುಸಾಗಿ ಬೆಳೆಯಬಹುದೆಂದು ಕಲ್ಪನೆ ಕಟ್ಟಿಕೊಂಡಿದ್ದ ನನ್ನ ಪಾಲಿನ ನೀನು ಟ್ರೇನಲ್ಲಿಟ್ಟ ಬೋನ್ಸಾಯ್ ಟ್ರೀಯಾಗಿ ದಿಗಿಲು ಹುಟ್ಟಿಸಿದೆ.

★★★

ನನ್ನ ಮದುವೆ ಉದ್ಯಮಿಯೊಬ್ಬನೊಂದಿಗೆ ಆಗಿಹೋದಾಗಲೂ ನೀನು ಮೊದಲಿನಂತಿಲ್ಲವೆಂತಲೋ, ದುಃಖಿತ ದೇವದಾಸನ ಹೊಸ ಮಾಡಲ್‌ನಂತೆ ತೋರಲೋ, ಗಡ್ಡಬಿಟ್ಟು ಓಡಾಡಿದಾಗ ನಾನೇನೂ ದುಃಖಿಸಲಿಲ್ಲ. ಕ್ಷೌರ ಮಾಡಿಸಲು ಕಾಸಿಲ್ಲದಿದ್ದರೆ ಕೇಳು ಕೊಡುತ್ತೇನೆಂದೆ. ನಿನ್ನದು ಅದೇ ಹ್ಯಾಪ್‌ಮೋರೆ. ನನ್ನ ಗಂಡನ ಬಳಿ ಕೆಲಸ ಕೊಡಿಸಲೆ ಎಂದು ನಾನು ಸಂಕಟಪಟ್ಟಾಗ, 'ಬೇಡ ಅದಕ್ಕಿಂತ ಸಾವು ಮೇಲು' ಎಂದು ನೀನೆಂದಾಗ ನಾನೇನು ವ್ಯಾಕುಲಗೊಳ್ಳಲಿಲ್ಲವಾದರೂ ನಿನ್ನ ಸ್ವಾಭಿಮಾನಕ್ಕೊಂದು 'ಹ್ಯಾಟ್ಸ್‌ಪ್' ಮನದಲ್ಲೇ ಹೇಳಿದೆ. ನನ್ನ ಗಂಡನಿಗೆ ಪ್ರೀತಿಸಲು ಬರೋಲ್ಲ ಕಣೋ. ಪ್ರೀತಿಯೆಂದರೆ ಸಂಭೋಗವಷ್ಟೆ. ಅದು ಕಾಲಕಾಲಕ್ಕೆ ಕರ್ತವ್ಯವೆಂಬಂತೆ ಘಟಿಸದಿದ್ದರೆ ಎಲ್ಲಿ ತನ್ನ ಹೆಂಡತಿ ಅದಕ್ಕಾಗಿ ಇನ್ನೊಬ್ಬನ ಬಳಿ ಹೋದಾಳೆಂಬ ಭಯದಲ್ಲಿದ್ದವನಂತೆ ಈತ ಅದನ್ನೂ ತನ್ನ ವರ್ಕಿಂಗ್ ಹೋಮ್ ಅವರ್ಸ್‌ನಲ್ಲಿ ಸೇರಿಸಿ ಬಿಟ್ಟಿದ್ದಾನೆ. 'ನೀನು ಪ್ರೀತಿಸಿ ಮೋಸ ಮಾಡಿದೆ ಚಿನ್ನ'